ತಂಗಿಯ ಗಂಡ ಮಾಡುವ ಕೆಲಸ, ಅವನಿಗೆ ಇದ್ದಿರಬಹುದಾದ ಆಸ್ತಿಪಾಸ್ತಿ ಯಾವುದರ ಬಗ್ಗೆಯೂ ಗೊತ್ತಿಲ್ಲದ ವ್ಯಕ್ತಿಗೆ, 'ಗಂಡಿಗೆ ಏನ್ ಕೆಲ್ಸ, ಎಷ್ಟು ಜಮೀನು ಇದೆ ಎನ್ನುವುದು ಗೊತ್ತಿಲ್ಲದೆ ಹೇಗೆ ಮದುವೆ ಮಾಡಿದ್ರಿ' ಎನ್ನುವ ಐಎಎಸ್ ಅಧಿಕಾರಿ ಪ್ರಶ್ನೆಗೆ ಬಂದ ಉತ್ತರ: 'ಖರ್ಚಾಗ್ಲಿ ಅಂತ ಮಾಡಿದ್ವಿ ಸಾ...'

ಐಎಎಸ್ ಅಧಿಕಾರಿ ಕರೀಗೌಡರ ಈ ಅನುಭವ ವೃತ್ತಾಂತ ಸಮಾಜಕ್ಕೆ ಮಾತ್ರವಲ್ಲ, ನಮ್ಮ ಅಂತರಂಗದ ಕತ್ತಲಿಗೂ ಬೆಳಕು ಚೆಲ್ಲುತ್ತದೆ.

# ಖರ್ಚಾಗ್ಲಿ ಅಂತ ಸಾ...



■ **ಕರೀಗೌಡ**
ಕಲೆ: ಭರತ್ ಲದ್ದಿಯವರ್

ನಾನಾಗ ಹೊಸಪೇಟೆ ಎ.ಸಿ. ಹನ್ನೊಂದು ವರ್ಷಗಳ ಹಿಂದಿನ ಮಾತಿದು. ಬಹಳ ಸಾರಿ, ಈ ಹುದ್ದೆ–ಜವಾಬ್ದಾರಿಗಳೆಲ್ಲಾ 'ಸರ್ಕಾರಿ ಕೆಲಸ ದೇವರ ಕೆಲಸ' ಎನ್ನುವಷ್ಟು ಯಾಂತ್ರಿಕವಾಗಿಬಿಟ್ಟಿರುತ್ತವೆ. ಆದರೂ ಒಮ್ಮೊಮ್ಮೆ ಅಂತಃಕರಣ ಕಲಕುವ, ನಮ್ಮ ಇಡೀ ಪ್ರಜ್ಞೆಯನ್ನೇ ಹಿಡಿದು ಅಲ್ಲಾಡಿಸಿಬಿಡುವ ಅನುಭವಗಳಾಗುತ್ತವೆ. ಅವತ್ತು ನನಗಾಗಿದ್ದೂ ಇದೇ.

ಬ್ರಿಟಿಷರ ಕಾಲದ ಎ.ಸಿ. ಬಂಗಲೆ ಅಂದ್ರೆ ಕೇಳ್ಬೇಕಾ! ಎತ್ತರದ ಸೀಲಿಂಗ್, ದೊಡ್ಡದಾದ ಬಾಗಿಲು ಮತ್ತು ಅರ್ಧ ಊರೇ ಕಾಣುವಷ್ಟು ಅಗಲದ ಕಿಟಕಿಗಳು. ಬ್ರಿಟಿಷ್ ಬಂಗಲೆಯಲ್ಲಿ ಇದ್ದಿದ್ದು ನಾನೊಬ್ಬನೇ. ಆದ್ದರಿಂದ ಆಗಾಗ ಇದು ನನ್ನ ಪಾಲಿಗೆ ಭೂತದ ಬಂಗಲೆ ಅನ್ನಿಸಿದ್ದಿದೆ. ನೆಲಮಹಡಿ ಮತ್ತು ಮೊದಲ ಅಂತಸ್ತಿನ ಕಟ್ಟಡ. ಕಳೆದ ಮೂವತ್ತು ವರ್ಷಗಳಲ್ಲಿ ಯಾವುದೇ ಅಧಿಕಾರಿ ಈ ಬಂಗಲೆಯ ಎಲ್ಲಾ ಕೊಠಡಿಗಳನ್ನು ಉಪಯೋಗಿಸಿದ್ದು ನಾನಂತೂ ಕಾಣೆ. ಕುಟುಂಬ ಸಮೇತವಾಗಿ ಆಳುಕಾಳು ಇಟ್ಟುಕೊಂಡಿರುವ ಸಂಸಾರಕ್ಕೂ ದೊಡ್ಡದೆನ್ನಿಸುವ ಬಂಗಲೆ. ಏನಿದ್ರೂ ಅವಿಭಕ್ತ ಕುಟುಂಬಕ್ಕೆ ಹೇಳಿ ಮಾಡಿಸಿದಂತಿದೆ. ಅಜ್ಜ ಅಜ್ಜಿಯಿಂದ ಮರಿ ಮೊಮ್ಮಕ್ಕಳವರೆಗೂ ಹದಿನೈದಿಪ್ಪತ್ತು ಮಂದಿ ಅನಾಯಾಸವಾಗಿ ಇರಬಹುದು. ನಾನು ನೆಲಮಹಡಿಯಿಂದ ಮೊದಲ ಮಹಡಿಗೆ ಹೋಗಿದ್ದೇ ಕಡಿಮೆ.

ಮೇಲಿನ ಮಹಡಿಗಿಂತ ಬಂಗಲೆಯನ್ನು ಆವರಿಸಿದ್ದ ಏಳೆಂಟು ಎಕರೆ ವಿಶಾಲ ಪ್ರದೇಶವೇ ನನ್ನನ್ನು ಹೆಚ್ಚು ಸೆಳೆಯುತ್ತಿತ್ತು. ಅಲ್ಲಿ ಹರಡಿಕೊಂಡಿದ್ದ ಹುಣಸೆ ಮರಗಳು ಸದಾ ನೆರಳು–ತಂಪನ್ನು ದಯಪಾಲಿಸುತ್ತಿದ್ದವಾದರೂ ಹುಣಸೆ ಮರಗಳು ಒಳ್ಳೆ ಆಮ್ಲಜನಕ ಹೊರಸೂಸುವುದಿಲ್ಲ ಎಂದು ಎಲ್ಲೋ ಓದಿದ್ದ–ಕೇಳಿದ್ದ ನೆನಪು. ನಮ್ಮ ಹಳ್ಳಿ ಕಡೆ ಈಗಲೂ ಹುಣಸೆ ಮರದ ಕೆಳಗೆ ರಾತ್ರಿ ಹೊತ್ತು ಮಲಗಿದರೆ ದೆವ್ವ ಬಂದು ಎದೆ ಮೇಲೆ ಅಮರಿಕೊಳ್ಳುತ್ತದೆ ಎನ್ನುವ ನಂಬಿಕೆ ಇದೆ. ಬಹುಶಃ ಒಳ್ಳೆ ಆಮ್ಲಜನಕ ಸಿಗದೆ ನಿದ್ದೆ ಬರದೆ ಒದ್ದಾಡುವ ಕಾರಣಕ್ಕೆ ನಮ್ಮ ಹಿರೀಕರು ದೆವ್ವದ ಬಾಲಕ್ಕೆ ಹುಣಸೆ ಮರ ಕಟ್ಟಿದ್ದರೇನೋ. ಅದು ಏರ್ ಕಂಡಿಷನ್ ಮತ್ತು ಫ್ಯಾನ್ ಅಗತ್ಯವೇ ಇಲ್ಲದಷ್ಟು ಗಾಳಿ–ಬೆಳಕು ಸರಾಗವಾಗಿ ಸಂಚರಿಸುವ ಸರಳ ವಾಸ್ತು ಬಂಗಲೆ.

ಹನ್ನೊಂದು ವರ್ಷಗಳ ಹಿಂದೆ ಇನ್ನೂ ಸಾಕಷ್ಟು ಕಾಡುಮೇಡು ಹೊಂದಿದ್ದ ಹೊಸಪೇಟೆ ಈಗ ಬಳ್ಳಾರಿಯಿಂದ ಮೈಕೊಡವಿಕೊಂಡು ಪ್ರತ್ಯೇಕವಾಗಿ ವಿಜಯನಗರ ಜಿಲ್ಲೆಯ ಜಿಲ್ಲಾಕೇಂದ್ರವಾಗಿದೆ. ಆಗಿನ ಎ.ಸಿ. ಬಂಗಲೆ ಈಗ ಡಿಸಿ ಗೃಹ ಕಚೇರಿ ಮತ್ತು ಬಂಗಲೆಯಾಗಿ ಬಡ್ತಿ ಪಡೆದಿದೆ.

ಅವತ್ತು ಭಾನುವಾರವಾದ್ದರಿಂದ ಲೇಟಾಗಿ ಎದ್ದರೂ ಪರ್ವಾಗಿಲ್ಲ ಎಂದು ಮಲಗಿಯೇ ಇದ್ದೆ. ಹುಣಸೆ ಮರಗಳ ಗರ್ಭದಲ್ಲಿದ್ದ ಬ್ರಿಟಿಷ್ ಬಂಗಲೆಯಲ್ಲಿ ನನ್ನ ನಿದ್ದೆ ಕದಿಯಲು ಆಗಿನ್ನೂ ವಾಟ್ಸಾಪು, ಟ್ವಿಟರ್, ಟೆಲಿಗ್ರಾಂಗಳು ಬಂದಿರಲಿಲ್ಲ. ತಲೆಯ ತುದಿಯಲ್ಲಿನ ಚಾಪೆಯ ಮೇಲಿದ್ದ ಮೊಬೈಲ್ ವೈಬ್ರೇಷನ್ ನಿದ್ದೆಗೆಡಿಸಿತು. ಬಲಗೈಯಲ್ಲಿ ಕಣ್ಣು ಉಜ್ಜಿಕೊಳ್ಳುತ್ತಾ ಎಡಗೈಯಲ್ಲಿ ನೋಕಿಯಾ ಸೆಟ್ಟನ್ನು ಕಿವಿಗಿಟ್ಟುಕೊಂಡು 'ಹಲೋ' ಎಂದೆ. 'ಗುಡ್ ಮಾನಿಂಗ್ ಸರ್.' ಸಬ್ ಇನ್‌ಸ್ಪೆಕ್ಟರ್ ನಾಯಕ್ ಕರೆ. ಈ ನಾಯಕ್ ಕೆಲಸವಿಲ್ಲದೆ ತೊಂದರೆ ಕೊಡುವ ಪೊಲೀಸ್ ಅಲ್ಲ.

'ಸಾರಿ ಸರ್' ಎನ್ನುವ ಪೀಠಿಕೆ ಹಾಕಿಯೇ ಮಾತು ಮುಂದುವರೆಸಿ, 'ರಜದ ದಿನ ನಿಮಗೆ ತೊಂದರೆ